## 19

# ಶಿಷ್ಯತ್ವಕ್ಕೆ ಒಂದು ಕರೆ

# (9:9-17)

ಈ ಸಮಯದಲ್ಲಿ, ವಿಷಯವು ಶಿಷ್ಯತ್ವದ ಕಡೆಗೆ ಹಿಂತಿರುಗುತ್ತಾ ಇದೆ (8:18-22; 9:9-17). ಯೇಸುವಿನಿಂದ ಮಾಡಲ್ಪಟ್ಟ ಅದ್ಭುತಕಾರ್ಯಗಳ ಜೋಡಣೆಗೆ ಸಂಬಂಧಪಟ್ಟಂತೆ ಈ ಭಾಗಗಳು ವಿಭಾಗಗಳಂತೆ ಕಾರ್ಯಮಾಡುತ್ತವೆ (8:1-17; 8:23-9:8; 9:18-34). ಶಿಷ್ಯತ್ವದ ಮೇಲಿನ ಈ ಎರಡನೆಯ ಭಾಗವು ಯೇಸು ಮತ್ತಾಯನನ್ನು ಕರೆದದ್ದು (9:9), ಪಾಪಿಗಳಿಗೆ ಆತನ ಆಹ್ವಾನ (9:10-13), ಮತ್ತು ತನ್ನ ಶಿಷ್ಯರ ಮಧ್ಯದಲ್ಲಿ ಉಪವಾಸಮಾಡಿದ ಸ್ಥಳ ಇವುಗಳ ವಿಷಯವು ಒಳಗೊಂಡಿದೆ (9:14-17).

## ಮತ್ತಾಯನಿಗೆ ಕರೆ (9:9)

**9ಯೇಸು ಅಲ್ಲಿಂದ ಹೋಗುತ್ತಿರುವಾಗ ಸುಂಕಕ್ಕೆ ಕೂತಿದ್ದ ಮತ್ತಾಯನೆಂಬ ಒಬ್ಬ ಮನುಷ್ಯನನ್ನು ನೋಡಿ - ನನ್ನನ್ನು ಹಿಂಬಾಲಿಸು ಎಂದು ಅವನನ್ನು ಕರೆಯಲು ಅವನು ಎದ್ದು ಆತನನ್ನು ಹಿಂಬಾಲಿಸಿದನು.**

**ವಚನ 9.** ಯೇಸು ಮಾಡುವ ಬೋಧನೆ ಮತ್ತು ಅದ್ಭುತಗಳೊಂದಿಗೆ, ಆತನೊಂದಿಗೆ ಪ್ರಯಾಣಮಾಡುತ್ತಾ, ಆತನಿಂದ ಕಲಿಯುತ್ತಾ ಮತ್ತು ಅಂತಿಮವಾಗಿ ಆತನ ಕುರಿತು ಶುಭ ಸಂದೇಶವನ್ನು ಸಾರುವಂತೆ ಯೇಸು ತನ್ನ ಶಿಷ್ಯರನ್ನು ಒಟ್ಟಿಗೆ ಸೇರಿಸುವ ಕಾರ್ಯದಲ್ಲಿ ನಿರತನಾಗಿದ್ದನು. ಕಳೆದ ಅಧ್ಯಾಯದಲ್ಲಿ, ಯೇಸುವನ್ನು ಬಹಳ ಹತ್ತಿರವಾಗಿ ಹಿಂಬಾಲಿಸಿಕೊಂಡು ಬರುವ ಒಬ್ಬ ಶಾಸ್ತ್ರಿಯನ್ನು ನಿರಾಶೆ ಮಾಡಿರುವಂತೆ ತೋರುತ್ತದೆ (8:19, 20), ಆದರೆ, ಈ ಸಮಯದಲ್ಲಿ, ಆತನು ಒಬ್ಬ ಸುಂಕದವನನ್ನು ಆಸಕ್ತಿಯಿಂದ ಪ್ರೋತ್ಸಾಹ ಮಾಡಿದ್ದಾನೆ.

**ಮತ್ತಾಯನ** ಕರೆಯುವಿಕೆಯನ್ನು ಮೂರು ಸಾರಾಂಶವಾದ ಸುವಾರ್ತೆಗಳಲ್ಲಿ ಕಂಡುಕೊಳ್ಳುತ್ತೇವೆ. ಈ ಸುವಾರ್ತೆಯ ಗ್ರಂಥ ಕರ್ತನು ತನ್ನನ್ನು "ಮತ್ತಾಯನು" (9:9) ಎಂಬುದಾಗಿ ಮತ್ತು "ಸುಂಕನಾದ ಮತ್ತಾಯನು" ಎಂದು ಹೇಳಿಕೊಂಡಿದ್ದಾನೆ (10:3). ಮಾರ್ಕ ಮತ್ತು ಲೂಕ ಈತನ ಕರೆಯುವಿಕೆಗೆ ಸಂಬಂಧಿಸಿದಂತೆ "ಲೇವಿ" ಎಂಬ ಪರ್ಯಾಯದ ಹೆಸರನ್ನು ಉಪಯೋಗಿಸಿದ್ದಾರೆ (ಮಾರ್ಕ 2:14; ಲೂಕ 5:27), ಆದರೆ ಆತನನ್ನು ಹನ್ನೆರಡು ಜನರು ಪಟ್ಟಿ ಮಾಡುವಾಗ "ಮತ್ತಾಯ" ಎಂದು ಸೂಚಿಸಲಾಗಿದೆ (ಮಾರ್ಕ 3:18; ಲೂಕ 6:15; ಅಪೊಸ್ತಲರ ಕೃತ್ಯಗಳು 1:13).

ಮತ್ತಾಯನು, ತನ್ನ ಉದ್ಯೋಗದ ನಿಮಿತ್ತ, "ಎಲ್ಲಾ ಮನುಷ್ಯರಿಂದ ಕೀಳಾಗಿ ನೋಡಲ್ಪಟ್ಟನು" ಎಂದು ಸೂಚಿಸಲಾಗಿದೆ.[1] ಸಾಮಾನ್ಯವಾಗಿ ಸುಂಕ ವಸೂಲಿ ಮಾಡುವವರು "ಹೆಚ್ಚಾಗಿ ದ್ವೇಷಿಸುವ" ಜನರ ಪಟ್ಟಿಯಲ್ಲಿ ಅವರು ಮೊದಲಿಗರಾಗಿ ಇರುತ್ತಿದ್ದರು. ಅವರು ರೋಮನ್ ಆಡಳಿತಗಾರರ ಮಧ್ಯಸ್ಥಗಾರರಾಗಿದ್ದರಿಂದ ಅವರು ಸ್ವಂತ ಜನರಿಗೆ ದ್ರೋಹಿಗಳಂತೆ ಯೋಚಿಸುತ್ತಿದ್ದರು. ಅಷ್ಟು ಮಾತ್ರವಲ್ಲದೆ, ಜನರಿಗೆ ಹೆಚ್ಚಿನ ಸುಂಕ ಹಾಕುತ್ತಿದ್ದರಿಂದ ಅವರನ್ನು ಕಳ್ಳರೆಂದು ಆಲೋಚಿಸುತ್ತಿದ್ದರು. ನಿರ್ಧಿಷ್ಟವಾದ ಒಂದು ಕ್ಷೇತ್ರದಲ್ಲಿ ತೆರಿಗೆ ಸಂಗ್ರಹವನ್ನು ಮಾಡಲು ಹೆಚ್ಚಾಗಿ ಬೆಲೆ ಬೇಡುವವನಿಗೆ ಕೊಡಲಾಗುತ್ತಿತ್ತು

(“ಸುಂಕ ಗುತ್ತಿಗೆದಾರ”; ಲೂಕ 19:2), ಮತ್ತು ಸುಂಕ ವಸೂಲಿ ಮಾಡುವವರು ಈತನ ಕೈಕೆಳಗೆ ಕೆಲಸಮಾಡುತ್ತಿದ್ದರು, ಅಲ್ಲಿ ಭ್ರಷ್ಟಚಾರದ ಪ್ರವೃತ್ತಿ ಇದ್ದಿತ್ತು (5:46ರ ಮೇಲಿನ ವ್ಯಾಖ್ಯಾನ ನೋಡಿರಿ). Thomas E. Schmidt ರವರು ವಿವರಿಸಿದ್ದಾರೆ,

> ದಲ್ಲಾಳಿಯ ಪದ್ಧತಿ ಕ್ರಮಬದ್ಧವಾಗಿ ಮಾಡಿದ್ದರೂ, ತೆರಿಗೆ ನಿರ್ಧರಿಸುವವನು ಅಧಿಕಾರದಿಂದ ಕೆಲವು ವಸ್ತುಗಳ ಬೆಲೆಯನ್ನು ನಿಗಧಿಮಾಡುವ ಅಧಿಕಾರವು ಅಪ್ರಮಾಣಿಕತೆಗೆ ಪ್ರೋತ್ಸಾಹವಾಗಿತ್ತು, ಸುಂಕ ವಸೂಲಿ ಮಾಡುವವರಿಗೆ ಸ್ನಾನಿಕನಾದ ಯೋಹಾನನ ಸಲಹೆಗಳು (ಲೂಕ 3:12-13) ಮತ್ತು ಜಕ್ಕಾಯನು ಹಿಂದಕ್ಕೆ ಕೊಡುತ್ತೇನೆಂದು ಪ್ರತಿಜ್ಞೆ ಮಾಡಿರುವದು (ಲೂಕ 19:8) ಮೋಸ ಮಾಡುವ ಪದ್ಧತಿಗೆ ಬಲವು ತೋರಿದ್ದವು.[2]

ಈ ಭ್ರಷ್ಟಚಾರದ ನಿಮಿತ್ತವಾಗಿ, ಕೆಲವು ಸುಂಕವಸೂಲಿ ಮಾಡುವವರು ಸಹಜವಾಗಿಯೇ ಅವರು ಬಹಳ ಐಶ್ವರ್ಯವಂತರಾದರು (ಲೂಕ 19:2).

ಈ ಕಾರಣಗಳಿಂದ ಸುಂಕವಸೂಲಿಗಾರರನ್ನು “ಪಾಪಿಗಳೆಂದು” ವರ್ಗಿಕರಿಸಲಾಯಿತು. ಸುಂಕವಸೂಲಿಗಾರರು ಅಶುದ್ಧರು ಮತ್ತು ಅವರು ಯಾವದನ್ನು ಮುಟ್ಟುತ್ತಾರೋ ಅದರ ಮೇಲೆ ಅವರ ಅಶುದ್ಧತೆ ಹೋಗುತ್ತದೆ ಎಂದು ಯೆಹೂದ್ಯ ಪಂಡಿತರ ಒಂದು ಸಂಪ್ರದಾಯ ಹೇಳಿದೆ.[3] ಅವರು ಹಣವನ್ನು, ಅನ್ಯಾಯ ಮಾರ್ಗದಲ್ಲಿ ಸಂಪಾದಿಸಿದ್ದನ್ನು, ದೇವಸ್ಥಾನದಲ್ಲಾಗಲಿ ಇಲ್ಲವೇ ಯೆಹೂದ್ಯ ಸಭಾಮಂದಿರಗಳಲ್ಲಿ ಸ್ವಾಗತಿಸದೆ ಇರುವದು ಸ್ಪಷ್ಟವಾಗಿತ್ತು.[4] ಅಷ್ಟುಮಾತ್ರವಲ್ಲದೆ, ಅವರಿಗೆ ಸಾಕ್ಷಿಕೊಡಲು ನ್ಯಾಯಾಲಯದಲ್ಲಿ ಅವಕಾಶ ಕೊಡುತ್ತಿರಲಿಲ್ಲ.[5] ಈ ಹಗೆಯ ನಿಮಿತ್ತ ವಾಗಿ, ಕೆಲವು ಸುಂಕ ವಸೂಲಿಗಾರರು ಆತ್ಮೀಕ ವಿಷಯದಲ್ಲಿ ಆಸಕ್ತಿ ತೋರಿಸುವವರಂತೆ ಕಂಡರು (ಲೂಕ 19:1-10; ನೋಡಿರಿ 18:9-14). ಮತ್ತಾಯನು, ಕರ್ತನ ಮೊದಲ ಶಿಷ್ಯರಲ್ಲಿ ಒಬ್ಬನಾಗಿದ್ದನು, ಇಂಥಹಾ ಹೀನೈಸಿರುವ ಗುಂಪಿನಿಂದ ಬಂದಿದವನಾಗಿದ್ದನು.

**ಯೇಸು** ಅಲ್ಲಿಂದ ಹೋಗುತ್ತಿರುವಾಗ, **ಸುಂಕವಸೂಲಿ** ಮಾಡುವವನ ಮಳಿಗೆಯಲ್ಲಿ (*telōnion*) ಕೂತುಕೊಂಡಿದ್ದ ಮತ್ತಾಯನನ್ನು ಸಂದಿಸಿದನು. ಮಳಿಗೆ ಇದು “ತೆರಿಗೆ ಮನೆ” ಅಥವಾ “ವಸ್ತುಗಳಿಗೆ ಸುಂಕಕೊಡುವ ಸ್ಥಳವಾಗಿತ್ತು.” R. T. France ರವರ ಪ್ರಕಾರ, “ಕಪೆರ್ನೌಮಿನಲ್ಲಿದ್ದ *ತೆರಿಗೆ ಕಛೇರಿಯು* ದೆಕಪೊಲಿ ಕೆರೆಯ ಆಚೆಯಿರುವ ಅಂತೀಪಸ್ ಅಧಿಪತ್ಯದ ಕೆಳಗಿರುವ ಸರಿಹದ್ದು ಇಲ್ಲವೇ ಫಿಲಿಪ್ಪನ ಅಧಿಪತ್ಯದಲ್ಲಿರುವ ಯೋರ್ದಾನ ಆಚೆಯ ಪ್ರದೇಶವನ್ನು ದಾಟಿಕೊಂಡು ತೆಗೆದುಕೊಂಡು ಹೋಗುವ ವಸ್ತುಗಳ ಮೇಲೆ ಸುಂಕ ವಸೂಲಿ ಮಾಡುವ ಜವಾಬ್ದಾರಿ ಹೊಂದಿತು.”[6] ಈ ಸುಂಕ ವಸೂಲಿ ಕೇಂದ್ರಗಳು ಜನರು ಹೆಚ್ಚಾಗಿ ಪ್ರಯಾಣಿಸುವ ಮಾರ್ಗಗಳಲ್ಲಿ ಸ್ಥಾಪಿಸಲ್ಪಡುತ್ತಿದ್ದವು ಅದರಿಂದ ಮತ್ತಾಯನಂತಹ ಅಧಿಕಾರಿಗಳು, ಪ್ರಯಾಣಿಕರ ವಸ್ತುಗಳಿಗೆ ಸುಂಕ ಹಾಕಲು ಸರಳವಾಗಿದ್ದಿರಬಹುದು.[7] ಮತ್ತಾಯನು ಸುಂಕದ ಅಧಿಕಾರಿಗಳಲ್ಲಿ ಒಬ್ಬನಾಗಿರುವದರಿಂದ, ವ್ಯಾಪಾರಿಗಳು ತಮ್ಮ ಪ್ರಯಾಣವನ್ನು ನಿಲ್ಲಿಸಲು ಮತ್ತು ಅವರಲ್ಲಿರುವ ಪ್ರತಿಪೊಟ್ಟಣ ತೆರೆಯಲು ಒತ್ತಾಯ ಮಾಡುತ್ತಿದ್ದಿರಬಹುದು.

ಯೇಸು ಮತ್ತಾಯನಿಗೆ ಸರಳವಾಗಿ, **ನನ್ನನ್ನು ಹಿಂಬಾಲಿಸು.** ಎಂದನು. ಅವನು ನಿಶ್ಚಯವಾಗಿ ಕೆಲವು ದಿನಗಳಿಂದ ಯೇಸುವಿನ ಕುರಿತು ಕೇಳಿರಬಹುದು ಮತ್ತು ಬಹುಶಃ ಆತನ ಅದ್ಭುತಗಳು ಮತ್ತು ಬೋಧನೆಗಳನ್ನು ಸಾಕ್ಷಿಕರಿಸಿರಬಹುದು. ಈತನಿಗಿಂತಲೂ ಮೊದಲು ಪೇತ್ರನು, ಆಂದ್ರೆಯನು, ಯಾಕೋಬನು ಮಾಡಿದ ಹಾಗೆಯೇ (4:18-22), ಮತ್ತಾಯನು **ಎದ್ದು ಆತನನ್ನು ಹಿಂಬಾಲಿಸಿದನು.** ಲೂಕ ಅದನ್ನು ಈ ರೀತಿಯಾಗಿ ಹೇಳಿದ್ದಾನೆ, “ಎಲ್ಲವನ್ನೂ ಬಿಟ್ಟು ಎದ್ದು ಆತನ ಹಿಂದೆ ಹೋದನು” (ಲೂಕ 5:28). ಭೂಲೋಕದಲ್ಲಿರುವ ನಾಶವಾಗಿ ಹೋಗುವ ಗಂಟಿಗೆ ಬದಲಾಗಿ (6:19-21), ಯೇಸು ಪರಲೋಕದ ಗಂಟನ್ನು

ಕೊಟ್ಟನು. ಮತ್ತಾಯನು ತನ್ನ ಅಧಿಕಾರದ ಸ್ಥಾನ, ಪ್ರಭಾವ ಮತ್ತು ಸಂಪತ್ತನ್ನು ಬಿಟ್ಟು - ಮತ್ತು ಸತ್ಯವೇದ ವಿವರಿಸಿದ ಹಾಗೆ, ಆತನು ಎಂದಿಗೂ ಹಿಂದಕ್ಕೆ ನೋಡಲಿಲ್ಲ. Leon Morris ರವರು ಯೇಸುವಿನಲ್ಲಿ ಮತ್ತಾಯನು ಇಟ್ಟಿರುವ ನಂಬಿಕೆಯನ್ನು ಹೀಗೆ ಗಮನಿಸಿದ್ದಾರೆ:

> ಮೀನು ಹಿಡಿಯುವವರು ಮೀನು ಹಿಡಿಯಲು ಪುನಃ ಹಿಂದಕ್ಕೆ ಹೋಗಬಹುದು, ಆದರೆ ಸುಂಕವಸೂಲಿಗಾರರು ತೆರಿಗೆ ವಿಧಿಸುವ ಕೆಲಸದಿಂದ ಹಿಂದಿರುಗಲು ಆಗುವದಿಲ್ಲ. ಹೇಗೋ, ಆತನ ಲಾಭದಾಯಕ ಹುದ್ದೆ ಬೇಗ ಇನ್ನೊಬ್ಬರಿಂದ ತುಂಬಿರಬಹುದು. ಆತನು ಇನ್ನೊಂದು ಹುದ್ದೆಯನ್ನು ಹುಡುಕಲು ಪ್ರಯತ್ನಿಸಿದರೆ, ನಿವೃತ್ತಿಯಾದ ಸುಂಕದ ವಸೂಲಿಗಾರನನ್ನು ಯಾರು ಹುದ್ದೆಗೆ ಇಟ್ಟುಕೊಳ್ಳುವರು?[8]

## ಪಾಪಿಗಳಿಗೆ ಯೇಸುವಿನ ಆಹ್ವಾನ (9:10-13)

**[10]ಅನಂತರ ಆತನು ಅವನ ಮನೆಯಲ್ಲಿ ಊಟಕ್ಕೆ ಕೂತಿರುವಾಗ ಬಹು ಮಂದಿ ಸುಂಕದವರೂ ಪಾಪಿಗಳೂ ಬಂದು ಯೇಸುವಿನ ಮತ್ತು ಆತನ ಶಿಷ್ಯರ ಪಂಕ್ತಿಯಲ್ಲೇ ಕೂತುಕೊಂಡರು. [11]ಫರಿಸಾಯರು ಅದನ್ನು ನೋಡಿ ಆತನ ಶಿಷ್ಯರನ್ನು - ನಿಮ್ಮ ಗುರುವು ಸುಂಕದವರ ಮತ್ತು ಪಾಪಿಗಳ ಸಂಗಡ ಯಾಕೆ ಊಟಮಾಡುತ್ತಾನೆ ಎಂದು ಕೇಳಿದರು. [12]ಆತನು ಅದನ್ನು ಕೇಳಿ ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು. ನೀವು ಹೋಗಿ [13]ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬ ಮಾತಿನ ಅರ್ಥವನ್ನು ಕಲಿತುಕೊಳ್ಳಿರಿ. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು ಅಂದನು.**

**ವಚನ 10.** ಮತ್ತಾಯನು ಯೇಸುವನ್ನು ಗೌರವಿಸಿ ತನ್ನ ಮನೆಯಲ್ಲಿ ಆತನಿಗೆ ಒಂದು ಔತಣವನ್ನು ಮಾಡಿಸಿದನು ಎಂಬ ವಾಸ್ತವ ಬಹುಶಃ ಗಾಂಭಿರ್ಯತೆಯಿಂದ ಮತ್ತಾಯನು ತನ್ನ ಸುವಾರ್ತೆಯಲ್ಲಿ ದಾಖಲಿಸಿರುವುದಿಲ್ಲ (ಮಾರ್ಕ 2:15; ಲೂಕ 5:29). ಆತನು ತನ್ನ ಸ್ನೇಹಿತರನ್ನು ಮತ್ತು ಜೊತೆಗಾರರನ್ನು, ಆತನಂತಿರುವ, ಸಾಮಾಜಿಕ ಹಾಗೂ ಧಾರ್ಮಿಕ ಬೇರೆ ಕುಲದವರನ್ನು ಆಹ್ವಾನಿಸಿದನು. **ಬಹು ಮಂದಿ ಸುಂಕದವರೊಂದಿಗೆ ಪಾಪಿಗಳು** (*hamartōloi*) ಎಂದು ಸೂಚಿಸಿರುವ ಇತರರು ಅಲ್ಲಿದ್ದರು. ದಶಮಾಂಶ ಮತ್ತು ಸಂಸ್ಕಾರ ಶುದ್ಧಿಕರಣ ಆಚರಣೆ ಒಳಗೊಂಡಂತೆ, ಫರಿಸಾಯರ ಸಂಪ್ರದಾಯವನ್ನು ಧರ್ಮಶ್ರದ್ಧೆಯಿಂದ ಹಿಂಬಾಲಿಸದ ಯೆಹೂದ್ಯರನ್ನು ಈ ಪದವು ಒಳಗೊಂಡಿದೆಯೋ?[9] ಯೆಹೂದ್ಯ ಪಂಡಿತರ ಸಾಹಿತ್ಯದಲ್ಲಿ ಅಂಥಹಾ ಜನರನ್ನು "ಸ್ವಂತ ಸ್ವಾಸ್ಥ್ಯದವರು" (*'am ha'arets*), ಅಂದರೆ, ಸಾಮಾನ್ಯ ಜನರಾಗಿದ್ದಾರೆ ಎಂದು ಸೂಚಿಸಲಾಗಿದೆ.[10] ಹೀಗಿದ್ದರೂ, Craig S. Keener ರವರ ವಾದ ಹೀಗಿದೆ, "ಇಲ್ಲಿ ಪಾಪಿಗಳು ಸಂಕುಚಿತ ಅರ್ಥ ಹೊಂದಿದ್ದರು ಎಂದು ಊಹಿಸಿಕೊಳ್ಳಲು ಯಾವ ಕಾರಣವಿಲ್ಲ; ಈ ಪದವು ನಿಯಮವನ್ನು ಮೀರಿ ಗಲಬೆ ಅರಚುವವರನ್ನು ನಿರ್ಧಿಷ್ಟ ವಾಗಿ ಸೂಚಿಸಿದೆ."[11]

ಪ್ರಸಿದ್ಧಿಯಿಲ್ಲದ ಜನರೊಂದಿಗೆ ಯೇಸು ಊಟಮಾಡುವ ಕಾರ್ಯ ಧಾರ್ಮಿಕ ಸ್ಥಾಪನೆಗೆ ಆಶ್ಚರ್ಯವಾಗಿರುವದು ರುಜುವಾತುಪಡಿಸಿದೆ (ಲೂಕ 15:1, 2). ಅಂದಿನ ದಿನದಲ್ಲಿ ಇನ್ನೊಬ್ಬನನ್ನು ಊಟಕ್ಕೆ ಕರೆದು ಅವರು ಬಂದು ಊಟದ ಮೇಜಿಗೆ ಕುಳಿತುಕೊಳ್ಳುವ ಆಚರಣೆ ಸ್ನೇಹ ಮತ್ತು ಒಗ್ಗಟ್ಟನ್ನು ಸೂಚಿಸುವಂಥದ್ದಾಗಿತ್ತು.[12] ಯೇಸು ಇಂಥಹಾ ಔತಣಕ್ಕೆ ಆತನು ಬಂದದ್ದರಿಂದ, ಆತನು "ಹೊಟ್ಟೆಬಾಕರ, ಕುಡುಕರ, ಸುಂಕವಸೂಲಿ ಮಾಡುವವರ ಸ್ನೇಹಿತನು ಮತ್ತು ಪಾಪಿಗಳು ಸ್ನೇಹಿತನು" ಎಂದು ಕರೆಯಲ್ಪಟ್ಟನು (11:19). ಆತನು ಪಾಪಿಗಳೊಂದಿಗೆ ಸಮಯ ಕಳೆದದ್ದೂ, ಯೇಸು ಪಾಪದ ಜನರೊಂದಿಗೆ ಊಟ ಮಾಡಿರುವದು

ಅವರ ಪಾಪ ಕೃತ್ಯದೊಂದಿಗೆ ಭಾಗಿಯಾಗಿರುವದಕ್ಕೆ ಸಮವೆಂದು ಪರಿಗಣಿಸಬಾರದು ಪಾಪಿಗಳ ಮಧ್ಯೆದಲ್ಲಿ ಆತನ ಇರುವಿಕೆಯು ತನ್ನ ಸತ್ಯವನ್ನು ಅವರಿಗೆ ಬೋಧಿಸಲು ಒಂದು ಅವಕಾಶವನ್ನು ಒದಗಿಸಿದೆ.

**ವಚನ 11.** ಯೇಸುವಿನ ಕರುಣೆಯ ಕುರಿತು **ಫರಿಸಾಯರು** ತುಂಬಾ ಜಾಣತನದಿಂದ ನೇರವಾಗಿ ಆರೋಪಿಸಿ ಪ್ರತಿಕ್ರಿಯಿಸಿದರು: **ನಿಮ್ಮ ಗುರುವು ಸುಂಕದವರ ಮತ್ತು ಪಾಪಿಗಳ ಸಂಗಡ ಯಾಕೆ ಊಟ ಮಾಡುತ್ತಾನೆ?** ಎಂದು ಕೇಳಿದರು. ನೀತಿವಂತನು ಅನೀತಿವಂತರ ಜೊತೆಯಲ್ಲಿ ಅನ್ಯೋನ್ಯತೆಯಲ್ಲಿರುವದು ಅವಮಾನಕರ ಎಂದು ಎಣಿಸುತ್ತಿದ್ದರು (ಕೀರ್ತನೆ 1:1; 119:63; ಜ್ಞಾನೋಕ್ತಿಗಳು 13:20; 14:7; ನೋಡಿರಿ 1 ಕೊರಿಂಥ 15:33). ಯೇಸುವೇ ಅವರ ಮೂಲ ಉದ್ದೇಶವಾಗಿದ್ದರೂ, ಇಂಥಹಾ ಗುರುವನ್ನು ಆರಿಸಿಕೊಂಡಿದ್ದಕ್ಕಾಗಿ ಅವರು ತಮ್ಮ ಟೀಕೆಯನ್ನು ಶಿಷ್ಯರಿಗೂ ಸಹ ವಿಸ್ತರಿಸಿದರು. ಆತನಿಗೆ ನೇರವಾಗಿ ಮುಂದೆ ಬಂದು ಟೀಕಿಸುವ ಭಯದಿಂದ, ಈ ರೀತಿಯಾಗಿ ಶಿಷ್ಯರ ಮುಖಾಂತರ ತಮ್ಮ ಹಗೆತನ ತೀರಿಸಿಕೊಳ್ಳಲು ಈ ಸುತ್ತಿಕೊಂಡು ಹೋಗುವ ಮಾರ್ಗವನ್ನು ಆರಿಸಿಕೊಂಡಿರಬಹುದು.

**ವಚನ 12.** ತನ್ನ ಶಿಷ್ಯರಿಗೆ ಮಾಡಿದ ವ್ಯಾಖ್ಯಾನವನ್ನು **ಯೇಸು** ಕೇಳಿಸಿಕೊಂಡನು ಮತ್ತು ಅದಕ್ಕೆ ಆತನು ಹೀಗೆ ಪ್ರತಿಕ್ರಿಯಿಸಿದನು. **ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ಬೇಕು ಎಂದು ಹೇಳಿದನು.** ಅವರಿಗೆ ಅವಶ್ಯವಾಗಿ ಬೇಕಾಗಿರುವ ಆತ್ಮೀಕ ವಿಷಯಗಳನ್ನು ಬೋಧಿಸಲು ಪ್ರತಿದಿನದ ಜೀವನದ ಅನುಭವದಲ್ಲಿನ ಸಾಮಾನ್ಯವಾದ ವಿವರಣೆಯನ್ನು ಯೇಸು ಉಪಯೋಗಿಸಿದನು. ಆರೋಗ್ಯದಿಂದಿರುವ ಜನರು ವೈದ್ಯರನ್ನು ಹುಡುಕುವುದಿಲ್ಲ; ಅನಾರೋಗ್ಯದಲ್ಲಿರುವವರು ವೈದ್ಯನನ್ನು ಹುಡುಕುತ್ತಾರೆ. ಯೇಸು ಆತ್ಮದ ದೊಡ್ಡ ವೈದ್ಯನಾಗಿದ್ದಾನೆ. ಯಾರು ಆತ್ಮೀಕವಾಗಿ ನಾವು ಸಂಪೂರ್ಣವಾಗಿ ಇದ್ದೇವೆ ಎನ್ನುವಂಥವರು, ಈ ಸಂದರ್ಭದಲ್ಲಿ ಆತನನ್ನು ಫರಿಸಾಯರು ಟೀಕಿಸಿದಂತೆ ಅವರ ಆತ್ಮೀಕ ರೋಗವನ್ನು ಗುಣಪಡಿಸಿಕೊಳ್ಳಲು ವೈದ್ಯನನ್ನು ಹುಡುವದಿಲ್ಲ. ಅವರು ತಮ್ಮ ಪಾಪದ ವಿಷಯದಲ್ಲಿ ಕುರುಡರಾಗಿದ್ದರು (15:14; 23:16, 17, 19, 24, 26; ಯೋಹಾನ 9:40, 41; 12:40; ನೋಡಿರಿ ಪ್ರಕಟಣೆ 3:17, 18).

ಇದರ ಕುರಿತಾಗಿ ಯೇಸು ಹೇಳಿರುವದರ ಬಗ್ಗೆ ಗ್ರೀಕ್ ಮತ್ತು ರೋಮನ್ ಬರಹಗಾರರು ಅಂತಹದ್ದೆ ಆದ ಹೇಳಿಕೆಯನ್ನು ದಾಖಲಿಸಿದ್ದಾರೆ. ತತ್ವಜ್ಞಾನಿಗಳು ಸಮಾಜದಲ್ಲಿರುವ ಕೊಳಕನ್ನು ಟೀಕಿಸುವದಕ್ಕಾಗಿ, ಉಪಯೋಗಿಸಿರುವ ಇಂಥಹಾ ಹೇಳಿಕೆಗಳು ಕೆಲವು ಸಾರಿ ಅವರ ಲಕ್ಷಣ ತೋರಿಸುತಿತ್ತು. "ವೈದ್ಯನು ರೋಗದಲ್ಲಿರುವ ಜನರಲ್ಲಿ ಇರುತ್ತಾನೆ" ಮತ್ತು "ವೈದ್ಯರು ರೋಗಿಗಳು ಇರುವಲ್ಲಿ ಹಾಜರಿದ್ದು ಅವರ ಜ್ವರವನ್ನು ಅವರು ತೆಗೆದುಕೊಳ್ಳದೆ ಅವರ ಸೇವೆ ಮಾಡುತ್ತಾರೆ"[13] ಎಂದು ಈ ಜನರು ಇದನ್ನು ಹೇಳಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಿದ್ದರು. "ಒಳ್ಳೆಯ ವೈದ್ಯನು ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಇರುವಲ್ಲಿಗೆ ಹೋಗಿ ಅವರಿಗೆ ಸೇವೆ ಮಾಡುತ್ತಾನೆ, ಅದರಿಂದ ... ವಿವೇಕವುಳ್ಳ ವ್ಯಕ್ತಿ ತನ್ನ ವಾಸವನ್ನು ಎಲ್ಲಿ ಹೆಚ್ಚಾಗಿ ಮುರ್ಖರು ಇರುತ್ತಾರೋ ಅಲ್ಲಿಗೆ ತೆಗೆದುಕೊಂಡು ಹೋಗಿ ಅವರ ಅವಿವೇಕ ಮತ್ತು ದೂಷಣೆ ತಿಳಿಸಿ ಹೇಳುತ್ತಾನೆ"[14] ಎಂದು ಅವರು ಹೇಳುವರು. ಆತ್ಮ ರೋಗ (ದುಷ್ಟತನ) ಬುದ್ಧಿವಂತನ (ತತ್ವಜ್ಞಾನಿ)[15] ಸಲಹೆ ಮೇರೆಗೆ ಗುಣಪಡಿಸಬಹುದು. ಅಷ್ಟುಮಾತ್ರವಲ್ಲದೇ, ಬಲವಾದ ಗದರಿಸುವ ಮಾತುಗಳು ವೈದ್ಯನ ನೋವವನ್ನುಂಟುಮಾಡುವ ರೋಗ ಪ್ರತಿಕ್ರಿಯೆಗೆ ಹೋಲಿಸಲಾಗಿದೆ.[16] ತತ್ವಜ್ಞಾನಿಯ ಗದರಿಕೆಯ ಮಾತುಗಳು ವೈದ್ಯರು ಕೋಪಗೊಳ್ಳದೆ ರೋಗಿಗೆ ಸೇವೆ ಮಾಡುವ ವೈದ್ಯನಿಗೆ ಹೋಲಿಕೆಯಾಗಿದೆ.[17]

**ವಚನ 13. ಹೋಗಿರಿ ಮತ್ತು ಕಲಿತುಕೊಳ್ಳಿರಿ** ಎಂದು ಹೇಳುವದು ಹಳೆ ಒಡಂಬಡಿಕೆಯ ವಾಕ್ಯದಲ್ಲಿ ಕೆಲವರು ತಮ್ಮನ್ನು ತಾವೇ ತತ್ವಜ್ಞಾನಿಗಳೆಂದು ತಿಳಿದುಕೊಂಡವರಿಗೆ ಗದರಿಸುವ ರೀತಿ ಇದಾಗಿತ್ತು (ನೋಡಿರಿ 12:5). "ಇದು ಒಂದು ಯೆಹೂದ್ಯ ಗುರುಗಳ

ಸೂತ್ರ ಚಿರಪರಿಚಿಯವಾಗಿರುವಂಥದ್ದಾಗಿದ್ದು ಯೆಹೂದ ಬೋಧಕರಿಂದ ಶ್ರೇಷ್ಠವಾದ **ಜ್ಞಾನ** ಎದುರಿಸುವಾಗ ಅವರು ಉಪಯೋಗಿಸಲಾಗಿದೆ."[18] "ಹೋಗಿರಿ ಮತ್ತು ಕಲಿತು ಕೊಳ್ಳಿರಿ" ಎನ್ನುವ ಯೆಹೂದ್ಯರ ಬೋಧನೆಯಾಗಿ, ಯೇಸುವಿನ ಉತ್ತರದ ಎರಡನೆಯ ಭಾಗವನ್ನು ಪರಿಚಯಿಸುತ್ತದೆ. "ಪ್ರಶ್ನೆಮಾಡುವವರ ಜ್ಞಾನದ ಕೊರತೆಯಿರುವದರಿಂದ ಅವರು ಧರ್ಮಶಾಸ್ತ್ರವನ್ನು ಕಲಿಯುವಂಥವರಾಗಿದ್ದಾರೆ" ಎನ್ನುವ ಅಭಿಪ್ರಾಯ ಸೂಚಿಸುತ್ತದೆ.[19]

ಈ ಅಂಶವನ್ನು ಇನ್ನು ಬಲಗೊಳಿಸಲು, ಯೇಸು ಪ್ರವಾದಿಯಾದ ಹೊಶೆಯನ ಗ್ರಂಥದಿಂದ ಎತ್ತಿ ಹೇಳಿದ್ದಾನೆ. ಆ ಜನರಿಗೆ ತಿಳಿದಿದ್ದರೂ ಸ್ಪಷ್ಟವಾಗಿ ತಿಳಿಯದೆ ಇರುವ ಒಂದು ವಾಕ್ಯಭಾಗವನ್ನು ಆರಿಸಿಕೊಂಡನು: **ನನಗೆ ಯಜ್ಞವು ಬೇಡ, ಕರುಣೆಯೇ ಬೇಕು** (ಹೊಶೆಯ 6:6). ಯೇಸು ಉಲ್ಲೇಖಿಸಿದ ಈ ವಾಕ್ಯಭಾಗದಲ್ಲಿನ ವ್ಯತ್ಯಾಸವುಳ್ಳ ಮಾತುಗಳನ್ನು ಸೂಚಿಸುತ್ತಾ Jack P. Lewis ರವರು ಹೀಗೆ ವಿವರಿಸಿದ್ದಾರೆ,

> ಇದರ ನಿರ್ಮಾಣ ರೂಪವು ಸೆಪ್ಟೆಂಜೆಂಟ್‌ಕ್ಕಿಂತಲೂ ಹೆಚ್ಚಾಗಿ ಇಬ್ರಿಯ ಗ್ರಂಥದ ಹೊಶೆಯ ವಾಕ್ಯಭಾಗದೊಂದಿಗೆ ಒಂದಾಗುತ್ತದೆ; ಹೀಗಿದ್ದರೂ, ಹಿಬ್ರೂ ಭಾಷೆಯ *hesed* (ಕರುಣೆ) ಎಂಬುದು *eleos* ಎಂದು ಸೆಪ್ಟೆಂಜೆಂಟ್‌ನಲ್ಲಿ ಆಗಿದೆ ಮತ್ತು ಯೇಸು ಕಾರ್ಯಮಾಡಿದ ಅನುಕಂಪ ಅಥವಾ ಕರುಣೆ ಎಂಬ ತತ್ವದ ಆಧಾರದ ಮೇಲೆ ಅರ್ಥಮಾಡಿಕೊಳ್ಳಲಾಗಿದೆ.[20]

ಫರಿಸಾಯರು ತಮ್ಮ ಆಚರಣೆಗಳಿಂದ ಅವರು ತೃಪ್ತರಾಗಿದ್ದರು, ಆದರೆ ಅವರ ಹೃದಯವು ದೇವರೊಂದಿಗೆ ಸರಿಯಾಗಿರಲಿಲ್ಲ. ಅವರು ಬಹಳ ಚಿಕ್ಕದ್ದಾಗಿರು ಮರುಗು ಸೋಪು ಜೀರಿಗೆಗಳಲ್ಲಿ ದಶಮಾಂಶ ಕೊಡುತ್ತಾರೆ, ಅವರು ಧರ್ಮಸಾಸ್ತ್ರದ ಅತಿ ಶ್ರೇಷ್ಠವಾದ ನಿಯಮ ಅದರಲ್ಲಿ "ಕರುಣೆಯು" ಒಳಗೊಂಡಂತೆ ಇವುಗಳನ್ನು ಬಿಟ್ಟು ಬಿಟ್ಟಿದ್ದಾರೆ (23:23). ಇಲ್ಲಿ "ಬಲಿ ಅರ್ಪಣೆ" (*thusia*) ಎಂಬುದು ಪ್ರಾಣಿಗಳ ಬಲಿಸಹ ಒಳಗೊಂಡಿದ್ದು ಅನೇಕ ಬೇರೆ ಬೇರೆ ಧಾರ್ಮಿಕ ಆಚರಣೆಗಳನ್ನು ಮಾಡುವದನ್ನು ಸೂಚಿಸುತ್ತದೆ. ಧರ್ಮಶಾಸ್ತ್ರದಲ್ಲಿ ಸೂಚಿಸಿರುವ ಬಲಿ ಸಮರ್ಪಣೆಯನ್ನು ಹೊಶೆಯ ಆಗಲಿ ಇಲ್ಲವೇ ಯೇಸು ಆಗಲಿ ಅದನ್ನು ಅಲ್ಲಗಳೆಯುತ್ತಿಲ್ಲ. ಈ ಉಲ್ಲೇಖನವು "Hebraism, ಅಂದರೆ, 'ಬಲಿ ಅರ್ಪಿಸುವದರಲ್ಲಿ ನನಗೆ ಕರುಣೆ ಇದೆ'"[21] ಎಂದು J. W. McGarvey ರವರು ಸೂಚಿಸಿದ್ದಾರೆ. ಇನ್ನೊಂದು ಸಂದರ್ಭದಲ್ಲಿ ಫರಿಸಾಯರನ್ನು ಎದುರಿಸಿದಾಗ ಇದನ್ನು ಯೇಸುವಿನಿಂದ ಪುನಃ ಉಪಯೋಗಿ ಸಲಾಗಿದೆ (12:7).

**ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು** ಎಂದು ಹೇಳಿ ಯೇಸು ಮುಕ್ತಾಯ ಮಾಡಿದನು. "ಕರೆ" ಎಂದು ಅನುವಾದಿಸಿರುವ ಗ್ರೀಕ್ ಪದವು (*kaleō*) "ಇದನ್ನು ಮದುವೆಯ ಉತ್ಸವ ದೃಷ್ಟಾಂತದಲ್ಲಿ ಕರೆದಿರುವಂತೆಯೇ ಇದು 'ಆಹ್ವಾನ' ಎಂಬುದಾಗಿ ಸಹ ಅರ್ಥಕೊಡುತ್ತದೆ (22:1-10)."[22] ಈ ಕರೆ ಪಾಪಿಗಳು ಪಶ್ಚಾತ್ತಾಪ ಹೊಂದುವದಕ್ಕಾಗಿ ಇತ್ತು (ಲೂಕ 5:32). "ಕೆಟ್ಟು ಹೋಗಿರುವವರನ್ನು ಹುಡುಕು ಮತ್ತು ರಕ್ಷಿಸು" ಎಂಬುದು ಈ ಲೋಕದಲ್ಲಿ ಯೇಸುವಿನ ಸೇವೆ ಆಗಿತ್ತು (ಲೂಕ 19:10). ಆತನು ತನ್ನ ಕೃಪೆಯುಳ್ಳ ಕರೆಯನ್ನು ಎಲ್ಲಾ ಪಾಪಿಗಳಿಗೆ ವಿಸ್ತರಿಸಿದನು; ಆದರೆ ಸ್ವನೀತಿ ಯುಳ್ಳ ಫರಿಸಾಯರು ತಾವುಗಳು ಪಾಪಿಯೆಂಬಂತೆ ನೋಡಿಕೊಳ್ಳಲಿಲ್ಲ, ಆದ್ದರಿಂದ ಅವರು ಆ ಕರೆಗೆ ಲಕ್ಷ್ಯಕೊಡಲಿಲ್ಲ. "ನೀತಿವಂತರು" ಎನ್ನುವ ಶಬ್ದವನ್ನು ಉಪಯೋಗಿ ಸುವದರಿಂದ, ಯೇಸು ಕೆಲವರು ಬಹಳ ಒಳ್ಳೆಯವರು ಅವರಿಗೆ ಆತನು ಪ್ರಸ್ತಾಪಿಸಿರುವ ರಕ್ಷಣೆ ಅಗತ್ಯವಿಲ್ಲವೆಂದಾಗಲಿ ಇಲ್ಲವೆ ಫರಿಸಾಯರು ನೀತಿವಂತರು ಎಂದಾಗಲಿ ಯೇಸುವಿನ ಅರ್ಥವಾಗಿರಲಿಲ್ಲ. ಕೇವಲ ಅವರು ತಮ್ಮ ಸ್ವಂತ ದೃಷ್ಟಿಯಲ್ಲಿ ಮಾತ್ರ ನೀತಿವಂತರಾಗಿದ್ದಾರೆ ಎಂದು ಆತನು ಹೇಳಿರುವದರ ಅರ್ಥವಾಗಿದೆ (ನೋಡಿರಿ ಲೂಕ 18:9-14).

## ಶಿಷ್ಯತ್ವ ಮತ್ತು ಉಪವಾಸ (9:14-17)

**[14]ಆ ಮೇಲೆ ಯೋಹಾನನ ಶಿಷ್ಯರು ಆತನ ಬಳಿಗೆ ಬಂದು - ಫರಿಸಾಯರೂ ನಾವೂ ಉಪವಾಸಮಾಡುತ್ತೇವಲ್ಲ; ನಿನ್ನ ಶಿಷ್ಯರು ಯಾಕೆ ಉಪವಾಸಮಾಡುವದಿಲ್ಲ ಎಂದು ಕೇಳಲು ಯೇಸು [15]ಅವರಿಗೆ - ಮದುವೆಯ ಜನರು ತಮ್ಮ ಸಂಗಡ ಮದಲಿಂಗನು ಇರುವ ತನಕ ದುಃಖ ಪಟ್ಟಾರೋ? ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡು ಹೋಗುವ ಕಾಲ ಬರುತ್ತದೆ; ಆಗ ಉಪವಾಸಮಾಡುವರು. ಯಾರೂ ಹೊಸ ಬಟ್ಟೆಯ ತುಂಡನ್ನು ಹಳೆಯ ವಸ್ತ್ರಕ್ಕೆ ತ್ಯಾಪೆಹಚ್ಚುವದಿಲ್ಲ; [16][ಹಚ್ಚಿದರೆ] ಆ ತ್ಯಾಪೆಯು ವಸ್ತ್ರವನ್ನು ಹಿಂಜುವದರಿಂದ ಹರಕು ಹೆಚ್ಚಾಗುವದು. [17]ಇದಲ್ಲದೆ ಹಳೆಯ ಬುದ್ದಲಿಗಳಲ್ಲಿ, ಹೊಸ ದ್ರಾಕ್ಷಾರಸವನ್ನು ಹಾಕಿಡುವದಿಲ್ಲ; ಇಟ್ಟರೆ ಬುದ್ದಲಿಗಳು ಒಡೆದು ದ್ರಾಕ್ಷಾರಸವು ಚೆಲ್ಲಿ ಹೋಗುವದು, ಬುದ್ದಲಿಗಳು ಕೆಟ್ಟುಹೋಗುವವು; ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡುತ್ತಾರೆ, ಆಗ ಎರಡೂ ಉಳಿಯುತ್ತವೆ ಎಂದು ಹೇಳಿದನು.**

**ವಚನ 14.** ಸ್ನಾನಿಕನಾದ ಯೋಹಾನನ ಶಿಷ್ಯರು ಉಪವಾಸ ಮಾಡುತ್ತಿದ್ದರು ಆದರೆ ಯೇಸುವಿನ **ಶಿಷ್ಯರು ಯಾಕೆ ಉಪವಾಸ ಮಾಡುವದಿಲ್ಲ** ಎಂದು ಸ್ನಾನಿಕನಾದ ಯೋಹಾನನ ಶಿಷ್ಯರು ಯೇಸುವಿಗೆ ಪ್ರಶ್ನಿಸಿದರು. ಅವರ ಪ್ರಶ್ನೆಯು ಸ್ವಾಭಾವಿಕವಾದ ಸಂದರ್ಭದಿಂದ ಹುಟ್ಟಿತ್ತು: ಯೋಹಾನನ ಶಿಷ್ಯರು *ಉಪವಾಸ* ಮಾಡುವಾಗ ಯೇಸು ಮತ್ತು ಆತನ ಶಿಷ್ಯರು ಹಬ್ಬಮಾಡುತ್ತಿದ್ದಾರೆ. Robert H. Mounce ರವರು ಹೀಗೆ ಸೂಚಿಸಿದ್ದಾರೆ, "ಹಿಂದಿನ ವಾಕ್ಯಭಾಗದಲ್ಲಿ ಯೇಸು ಬೇರೆ ಕುಲದವರೊಂದಿಗೆ ಊಟಮಾಡುತ್ತಿದ್ದರು ಎಂಬ ಎಂಬ ಪ್ರಶ್ನೆ ಇತ್ತು; ಈಗ ಆತನು ಊಟ ಮಾಡುತ್ತಿದ್ದಾನೆಯೋ ಎಂಬ ಪ್ರಶ್ನೆಯಾಗಿತ್ತು!"[23] ಯೇಸುವಿನ ಶಿಷ್ಯರು ಶಿಷ್ಯತ್ವಕ್ಕೆ ಸಂಬಂಧ ಪಟ್ಟಂತೆ ಉಪವಾಸದ ಪಾತ್ರ ಏನಾಗಿತ್ತು ಎಂದು ತಿಳಿದುಕೊಳ್ಳಬೇಕಾಗಿತ್ತು. ಈ ಸಮಯದಲ್ಲಿ ಯೇಸು ಮತ್ತು ಆತನ ಶಿಷ್ಯರು ಉಪವಾಸ ಮಾಡಲಿಲ್ಲ ಎಂಬ ವಾಸ್ತವವು ಅವರ ಆಂದೋಲನದಲ್ಲಿ ಮುಖ್ಯವಾದ ಒಂದು ಕೊರೆತೆ ಎಂದು ಅವಲೋಕಿಸಲಾಗಿದೆ.

ಯೇಸುವಿಗೆ ಭಿನ್ನವಾಗಿ, ಯೋಹಾನನು ಸನ್ಯಾಸಿಯ ಜೀವನವನ್ನು ಜೀವಿಸಿದನು (3:1-4). ಇಬ್ಬರ ನಡುವೆ ಇಂಥಹಾ ಭಿನ್ನತೆಯನ್ನು ಬಹಳ ಸೂಕ್ಷ್ಮವಾದ ಟೀಕೆಗಳಿಂದ ಗಮನಿಸಿದ್ದಾರೆ. ಒಂದು ರೀತಿಯಲ್ಲಿ, "ಯೋಹಾನನು ತಿನ್ನುವದಕ್ಕಾಗಿಯಾಗಲಿ ಇಲ್ಲವೆ ಕುಡಿಯುವದಕ್ಕಾಗಲಿ ಬರಲಿಲ್ಲ," ಮತ್ತು ಅವರು ಆತನಿಗೆ "ದೆವ್ವ" ಹಿಡಿದದೆ ಎಂದು ಹೇಳಿದರು. ಇನ್ನೊಂದು ರೀತಿಯಲ್ಲಿ, ಯೇಸು ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದಾನೆ; ಮತ್ತು ಆತನನ್ನು ಅವರು "ಹೊಟ್ಟೆಬಾಕನು, ಕುಡುಕನು, ಭ್ರಷ್ಟರ ಮತ್ತು ಪಾಪಿಷ್ಠರ ಗೆಳೆಯನು" ಎಂದು ಆರೋಪಿಸಿದರು (11:18, 19).

ಅವರು ತಕ್ಷಣವೇ ತಮ್ಮ ಸ್ವಾಮಿ ನಿಷ್ಠೆಯನ್ನು ಯೇಸುವಿಗೆ ಬದಲಾಯಿಸಲಿಲ್ಲ ಎಂದು ಈ ಮೂಲ ವಾಕ್ಯಭಾಗದಲ್ಲಿ ಯೋಹಾನನ ಶಿಷ್ಯರ ಇರುವಿಕೆ ಸೂಚಿಸುತ್ತದೆ. ಈ ಎರಡು ಸೇವೆಗಳು ವಿಸ್ತಾರಗೊಂಡವು, ಮತ್ತು ಯೇಸುವಿನ ಸೇವೆ ಬೆಳೆಯುತ್ತಾ ಇತ್ತು, ಯೇಹಾನನು, ಯೇಸುವಿನ ಮುಂದೂತನಾಗಿದ್ದನು, ತನ್ನ ಶಿಷ್ಯರಿಗೆ ಯೇಸುವನ್ನು ತೋರಿಸಿದನು (ಯೋಹಾನ 1:29-42). ಹೀಗಿದ್ದರೂ, ಯೋಹಾನನು ಬೋಧಿಸುವದನ್ನು ಮತ್ತು ದೀಕ್ಷಾಸ್ನಾನ ಮಾಡಿಸುವದನ್ನು ಮುಂದುವರಿಸಿದನು. ಬೇಗನೆ, ಯೋಹಾನನ ಸೇವೆಯನ್ನು ಯೇಸು ಮೀರಿಸಿದನು: "ಯೇಸುವು ಯೋಹಾನನಿಂಗಿತಲೂ ಹೆಚ್ಚಾಗಿ ಶಿಷ್ಯರನ್ನು ಮಾಡುತ್ತಿದ್ದನು ಮತ್ತು ದೀಕ್ಷಾಸ್ನಾನ ಮಾಡಿಸುತ್ತಿದ್ದನು" (ಯೋಹಾನ 4:1). ತರುವಾಯ ಯೋಹಾನನು ಸೇರೆಗೆ ಹಾಕಲ್ಪಟ್ಟನು ಮತ್ತು ಹೆರೋದ ಅಂತಿಪಸ್‌ನಿಂದ ಶಿರಚ್ಛೇದನ ಮಾಡಲಾಯಿತು (4:12; 11:1-15; 14:1-12).

ಆತನ ಸೇವಾ ಅವಧಿಯಲ್ಲಿ, ಯೋಹಾನನು ತನ್ನ ಹಿಂಬಾಲಕರು ಉಪವಾಸ ಮತ್ತು ಪ್ರಾರ್ಥನೆ ಮಾಡಲು ನಿಸ್ಸಂದೇಹವಾಗಿ ಸೂಚಿಸಿದನು (ಲೂಕ 5:33; 11:1). ಯೋಹಾನನ ಶಿಷ್ಯರು ಮತ್ತು **ಫರಿಸಾಯರೂ** ಉಪವಾಸ ಮಾಡುವ ಆಚರಣೆಯಲ್ಲಿ ಒಪ್ಪಂದಕ್ಕೆ ಬಹಳ ಹತ್ತಿರವಾಗಿದ್ದರೆಂದು ಕಾಣಿಸುತ್ತದೆ. ಅವರು ಉಪವಾಸ ಮಾಡಿದ್ದರೆಂದು ಹೇಳುವಾಗ, ಅವರು ಆಗಾಗ ಉಪವಾಸ ಮಾಡಿದ್ದರೆಂದು ಅವರು ಸೂಚಿಸಿದ್ದಾರೆ. ಹಿಂದೆ ಹೇಳಿದಂತೆಯೇ, ಕೇವಲ ಪಶ್ಚಾತ್ತಾಪದ ದಿನದಂದು ಮಾತ್ರವೇ ಉಪವಾಸ ಮಾಡಲು ಆಜ್ಞೆಮಾಡಲಾಗಿತ್ತು (Yom Kippur; ಯಾಜಕಕಾಂಡ 16:29-31), ಆದರೆ ಫರಿಸಾಯರು ಒಂದು ವಾರದಲ್ಲಿ ಎರಡು ದಿನಗಳು ಉಪವಾಸ ಮಾಡುವ ಅಭ್ಯಾಸ ಅವರಿಗಿತ್ತು: ಸೋಮವಾರ ಮತ್ತು ಗುರುವಾರ. ಅವರ ಸಂಪ್ರದಾಯ ಬೆಳೆದಂತೆಯೇ ಯೆಹೂದ್ಯ ರಬ್ಬಿಗಳ ಇತರೆ ಉಪವಾಸವು ಸೇರಿಸಲ್ಪಟ್ಟಿದೆ (6:16ರ ಮೇಲಿನ ವ್ಯಾಖ್ಯಾನ ನೋಡಿರಿ).

ಮುಂದೆ ಮೂರು ದೃಷ್ಟಾಂತಗಳು ವಿವರಿಸಲಾಗಿದೆ - ಮದಲಿಂಗನು ಲಕ್ಷಣ (9:15), ವಸ್ತ್ರ (9:16), ಮತ್ತು ದ್ರಾಕ್ಷೆ ಬುದ್ದಲಿಗಳು (9:17) - ಯೋಹಾನನ ಶಿಷ್ಯರ ಪ್ರಶ್ನೆಗೆ ಉತ್ತರಿಸಲು ಅವುಗಳನ್ನು ಪ್ರಸ್ತಾಪಿಸಲಾಗಿದೆ. ಆತನು ಭೂಲೋಕದಲ್ಲಿ ಶಿಷ್ಯರ ಮಧ್ಯೆಯಿರುವಾಗ ಅವರ ಉಪವಾಸ ಅಸಂಬದ್ಧವಾಗಿದೆ ಎಂದು ಯೇಸು ಸೂಚಿಸಿದನು.

**ವಚನ 15. ಮದುವೆಯ ಜನರು ತಮ್ಮ ಸಂಗಡ ಮದಲಿಂಗನು ಇರುವ ತನಕ ದುಃಖಪಟ್ಟರೋ?** ಎಂದು ಮೊದಲನೆ ದೃಷ್ಟಾಂತದಲ್ಲಿ **ಯೇಸು** ಕೇಳಿದನು. "ಮದಲಿಂಗನ ಸ್ನೇಹಿತನೆಂದು" ಪ್ರಾರಂಭದಲ್ಲಿ ಸ್ನಾನಿಕನಾದ ಯೋಹಾನನು ತನ್ನ ಶಿಷ್ಯರಿಗೆ ಗುರುತಿಸಿಕೊಂಡನು ("ಒಳ್ಳೆಯ ಮನುಷ್ಯ"; NLT), ಮತ್ತು ಯೇಸು ಮದಲಿಂಗನಾಗಿದ್ದನು (ಯೋಹಾನ 3:29; ನೋಡಿರಿ 22:2, 3; 25:1; ಎಫೆಸ 5:22-33; ಪ್ರಕಟಣೆ 19:7; 21:9). "ಮದಲಿಂಗನ ಜೊತೆಗಿರುವವರು" ಆತನ ಜೊತೆಗೆ ಆಪ್ತರಾಗಿ ನಿಂತವರು ಮದುವೆ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ವಾಕ್ಯಭಾಗವು ಕೆಲವು ಸಾರಿ ಬಹಳ ಸಾಮಾನ್ಯವಾಗಿ ವಿಶ್ಲೇಷತೆ ಇಲ್ಲದೆ "ಮದುವೆಯ ಅಥಿತಿಗಳು" (NRSV) ಎಂದು ಅನುವಾದಿಸಲಾಗಿದೆ. ಯೇಸುವಿನ ಪ್ರಶ್ನೆ ನಕರಾತ್ಮಕ ಉತ್ತರವನ್ನು ಮೀರಿಸುತ್ತದೆ. ಉಪವಾಸವು, ಮಾಡುವದರಿಂದ ಶೋಕಿಸುವ ಗುಣಲಕ್ಷಣ ತೋರಿಸುವಂತದ್ದಾಗಿದೆ, ಸಂತೋಷವುಳ್ಳ ಮದುವೆಯೊಂದಿಗೆ ಆಚರಣೆ ಅಸಂಮಜಸವಾಗಿದೆ.[24]

ಯೇಸು ಸೂಚಿಸಿದ್ದೇನೆಂದರೆ, ಯೋಹಾನನ ಶಿಷ್ಯರು ಆಗಾಗ **ಉಪವಾಸ** ಮಾಡುತ್ತಿದ್ದಾಗ, ಯೇಸುವಿನ ಶಿಷ್ಯರು ಉಪವಾಸ ಮಾಡದೆ ಇರುತ್ತಿದ್ದರು, ಉಪವಾಸ ಮಾಡಲು ಅವರಿಗೆ ಸಮಯ ಬರುತ್ತದೆ ಎಂದು ಹೇಳಿದನು. "ಯೇಸು ಅವರೊಂದಿಗೆ ಇರುವಾಗ, ಆತನ ಶಿಷ್ಯರು ಸಂತೋಷ ಪಡುವ ಮತ್ತೊಂದು ಸಂದರ್ಭದಲ್ಲಿದ್ದರು; ಆದರೆ ಆತನು ಹೋದ ಮೇಲೆ, ಉಪವಾಸವು ಯುಕ್ತವೆನ್ನಿಸುತ್ತದೆ. ಯೋಹಾನನು ಸೆರೆಮನೆಯಲ್ಲಿದ್ದರೂ [4:12] ಇಲ್ಲವೆ ಸತ್ತರೂ [14:10] ಆತನ ಶಿಷ್ಯರು ಬೇರೆ ಸಂದರ್ಭದಲ್ಲಿ ಇದ್ದರು" ಎಂದು Lewis ರವರು ವಿವರಿಸಿದ್ದಾರೆ.[25]

ಹಳೆ ಒಡಂಬಡಿಕೆಯಲ್ಲಿ ಉಪವಾಸಕ್ಕಾಗಿ ಇರುವ ಮುಖ್ಯವಾದ ಸನ್ನಿವೇಶಗಳಲ್ಲಿ ಗೋಳಾಡುವದು ಆಗಿತ್ತು, ಆತನ ಮರಣದ ನಂತರ ಸಂಭವಿಸುವ ಉಪವಾಸದ ಕುರಿತು ಯೇಸು ಬಹುಶಃ ಸೂಚಿಸಿದ್ದಾನೆ - ಆತನು **ಅವರ ಬಳಿಯಿಂದ ತೆಗೆದುಕೊಂಡು ಹೋದ** ನಂತರ. ಈ ಭಾಷೆಯು ಯೆಶಾಯ 53:8ರಲ್ಲಿ ಕಂಡುಕೊಂಡಿರುವ ಶ್ರಮಯ ಪ್ರವಾದನೆಗೆ ಸರಿಸಮವಾಗಿದೆ: "ಹಿಂಸೆಯ ಮತ್ತು ನ್ಯಾಯದಿಂದ ಅವನು *ತೆಗೆಯಲ್ಪಡುವನು*" (ಒತ್ತಿ ಹೇಳಿದ್ದು ನನ್ನದು). ಮತ್ತಾಯನ ಸುವಾರ್ತೆಯಲ್ಲಿ ಕ್ರೂಜೆಯ ಕುರಿತು ಉಲ್ಲೇಖವಾಗಿರುವದು ಮೊದಲನೆ ಸಾರಿಯಾಗಿದೆ (ನೋಡಿರಿ 16:21; 17:22, 23; 20:18, 19). ಯೇಸುವಿನ ವಿಸ್ತಾರವಾದ ಅನ್ವಹಿಸುವಿಕೆಯು ಸಾಮಾನ್ಯವಾದ ಕ್ರೈಸ್ತರ ಉಪವಾಸದ ಅಳವಡಿಸುವಿಕೆಯನ್ನು

ಸೂಚಿಸುತ್ತದೆ, ಆತನು ಸತ್ತಮೇಲೆ ಆತನ ಶಿಷ್ಯರು ವಿಶೇಷ ಉಪವಾಸ ಮಾಡುತ್ತಾರೆಂದು ಸೂಚಿಸಿ ಹೇಳುವಂತೆ ಕಾಣಿಸುತ್ತದೆ. ಯೇಸು ಅವರೊಂದಿಗೆ ಇರುವವರೆಗೆ ಅಲ್ಲಿ ಉತ್ಸಾಹದ ಸಂದರ್ಭವಾಗಿತ್ತು; ಆದರೆ ಆತನು ಮರಣಹೊಂದಿದಾಗ ಕನಿಷ್ಟ ಆತನು ಪುನರುತ್ಥಾನವಾಗುವ ತನಕ ದುಃಖವು ಅವರನ್ನು ತುಂಬಿತ್ತು (ಯೋಹಾನ 16:16-22). ಉಪವಾಸವು ಅವರ ದುಃಖಕ್ಕೆ ಸ್ವಾಭಾವಿಕವಾದ ಕಾರ್ಯದ ಫಲವಿದ್ದಂತೆ. ಯೇಸು ಮಾಡಿದ ವ್ಯತ್ಯಾಸವು ನಿಜಕ್ಕೂ "ಯೇಸುವಿನೊಂದಿಗೆ ಊಟಮಾಡುವ ಅನ್ಯೋನ್ಯತೆ ಮದುವೆಯ ಸಂತೋಷ ಮತ್ತು ಯೇಸುವಿನ ಶವಸಂಸ್ಕಾರದ ಗೋಳಾಟದ ಮಧ್ಯೆ ಇರುವ ವ್ಯತ್ಯಾಸವಾಗಿದೆ."[26]

**ವಚನಗಳು 16, 17.** ಇತರ ಎರಡು ದೃಷ್ಟಾಂತಗಳು ಉಪವಾಸದ ಕುರಿತು ಯೇಸು ತನ್ನ ಶಿಷ್ಯರೊಂದಿಗೆ ಇರುವಾಗ ಉಪವಾಸವು ಅಸಮಂಜಸವಾಗುತ್ತದೆ ಎಂದು ಒತ್ತಿ ಹೇಳುವದನ್ನು ಮುಂದುವರಿಸಿವೆ. ಮದುವೆಯ ಉತ್ಸವದಲ್ಲಿ ಗೋಳಾಡುವದು ಸರಿಯಿಲ್ಲದಂತೆಯೇ **ಆ ತ್ಯಾಪೆಯು ವಸ್ತ್ರವನ್ನು ಹಿಂಜುವದು ಹಳೆಯ ವಸ್ತ್ರಕ್ಕೆ ತ್ಯಾಪೆಹಚ್ಚುವದಿಲ್ಲ.** ಈ ಎರಡು ಸರಳವಾಗಿ ಹೊಂದಿಕೆಯಾಗುವದಿಲ್ಲ. "ಹಿಂಜುವ ವಸ್ತ್ರ"ವನ್ನು *"himation"* ನೇಯುವವನು ಉಪಯೋಗಿಸುವದಿಲ್ಲ. "ವಸ್ತ್ರ" ಎಂಬ ಪದ ಸಾಮಾನ್ಯ ವಸ್ತ್ರವನ್ನು ಸೂಚಿಸುತ್ತದೆ. ಅಥವಾ ಇನ್ನು ನಿರ್ಧಿಷ್ಟವಾಗಿ ಹೊರಮೇಲ್ಭಾಗದ ವಸ್ತ್ರವಾಗಿರುತ್ತದೆ, ಇದು ಹೆಚ್ಚಾಗಿ ಹರಿದು ಹೋಗುವಂತದ್ದಾಗಿರುತ್ತದೆ (5:40ರ ಮೇಲಿನ ವ್ಯಾಖ್ಯಾನ ನೋಡಿರಿ). ಹೊಸ ಬಟ್ಟೆಯ ತುಂಡು ಹಳೆ ವಸ್ತ್ರಕ್ಕೆ **ತ್ಯಾಪೆ** ಹಚ್ಚಿದರೆ, ಅದು ತೊಳೆಯುವಾಗ ಅದು ಹಿಂಜುವದರಿಂದ ಅದರ **ಹರಕು ಹೆಚ್ಚಾಗುತ್ತದೆ.**

ಹೊಸ ಬಟ್ಟೆ ಹಳೆ ವಸ್ತ್ರಕ್ಕೆ ತ್ಯಾಪೆ ಹಚ್ಚುವದಿಲ್ಲ ಅದರಂತೆ **ಹಳೆಯ ಬುದ್ದಲಿಗಳಲ್ಲಿ, ಹೊಸ ದ್ರಾಕ್ಷಾರಸವನ್ನು** ಹಾಕಿಡುವದಿಲ್ಲ. ಪ್ರಾಣಿಗಳ ಚರ್ಮದಲ್ಲಿ ನೀರು, ಹಾಲು, ಮತ್ತು ದ್ರಾಕ್ಷಾರಸ ದ್ರವರೂಪದ ವಸ್ತುಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದರು. William Hendriksen ರವರು ಈ ವಿವರಣೆ ಕೊಟ್ಟಿದ್ದಾರೆ:

> ದ್ರಾಕ್ಷಾರಸ ಬುದ್ದಲಿಗಳು ಸಾಮಾನ್ಯವಾಗಿ ಕುರಿ ಅಥವಾ ಆಡಿನ ಚರ್ಮದಿಂದ ಮಾಡುತ್ತಿದ್ದರು. ಪ್ರಾಣಿಯಿಂದ ತೆಗೆದು ಅದನ್ನು ಹದಮಾಡುತ್ತಾರೆ, ಮತ್ತು ಕೂದಲೆಲ್ಲಾ ತೆಗೆದು ಚರ್ಮ ಒಳಭಾಗವನ್ನು ಹೊರಗೆ ಮಾಡಿ ತಿರುಗಿಸುತ್ತಾರೆ. ಕುತ್ತಿಗೆಯು "ಬಾಟಲಿಯ" ಬಾಯಿ ಆಗುತ್ತದೆ. ಇತರೆ ತೆರೆದಿರುವ ಭಾಗ ಕಾಲು ಮತ್ತು ಬಾಲ ಅವುಗಳನ್ನು ಸಣ್ಣ ಹಗ್ಗದಿಂದ ಕಟ್ಟುತ್ತಾರೆ.[27]

ದ್ರಾಕ್ಷಾರಸವನ್ನು ಚರ್ಮದಲ್ಲಿ ಶೇಖರಿಸಿಡುವಾಗ ಅದರ ಉಳಿಯುವಿಕೆ ಹೆಚ್ಚಾಗುತ್ತಿತ್ತು. ಅದು ಅಲ್ಲದೆ, ಹೆಚ್ಚಿನ ಸಮಯ, ಈ ಚರ್ಮ ಒಣಗಿ ಹೋಗುತ್ತಿತ್ತು ಮತ್ತು ಸೀಳುಕೊಂಡು ಹೋಗುತ್ತಿತ್ತು. ಒಂದು ವೇಳೆ ಹೊಸ ದ್ರಾಕ್ಷಾರಸ ಹಳೆ ಬುದ್ದಲಿಗಳಲ್ಲಿ ಹಾಕಿಟ್ಟರೆ, ಅದರ ಉಳುವಿಕೆಯ ಪ್ರಕ್ರಿಯೆ ಕೆಟ್ಟುಹೋಗುವಂಥದ್ದಾಗಿರಬಹುದು ಮತ್ತು ಅದರ ನಿಮಿತ್ತವಾಗಿ **ಹೊಸ ದ್ರಾಕ್ಷಾರಸ** ನಷ್ಟವಾಗುತಿತ್ತು, **ಹೊಸ ದ್ರಾಕ್ಷಾರಸ** ಹೊಸ ಬುದ್ದಲಿಗಳಲ್ಲಿ ಹಾಕಿದಾಗ ಮಾತ್ರ ಅದು ಹೊಂದಿಕೆಯಾಗುತ್ತದೆ.

ಹೊಂದಿಕೆಯಾಗದ ತತ್ವದ ವಿಷಯವಾಗಿ, ಆಳವಾಗಿ ಗುರುತಿಸುವ ಸಾಧ್ಯತೆಯು ಈ ಎರಡು ಉದಾಹರಣೆಗಳಲ್ಲಿ ಇವೆ. ಎರಡು ಉದಾಹರಣೆಗಳು, "ಸಾಮ್ಯಗಳನ್ನು" ರಚನೆ ಮಾಡುವಂಥವುಗಳಾಗಿವೆ (ಲೂಕ 5:36-38), ಹಳೆ ಮತ್ತು ಹೊಸದ ಮಧ್ಯೆಯಿರುವ ವ್ಯತ್ಯಾಸವನ್ನು ತೋರಿಸುತ್ತದೆ: ಹಳೆ ವಸ್ತ್ರ /ಹೊಸ ತ್ಯಾಪೆ ಮತ್ತು ಹಳೆ ಬುದ್ದಲಿಗಳು /ಹೊಸ ದ್ರಾಕ್ಷಾರಸ. ಹಳೆ ಯೆಹೂದ್ಯ ಮತದ ಸ್ವರೂಪ - ಮಾನವ ಸಂಪ್ರದಾಯದಿಂದ ಅದನ್ನು ಭ್ರಷ್ಟಗೊಳಿಸಿದ್ದಾರೆ - ಅದನ್ನು ಕ್ರೈಸ್ತತ್ವದ ಹೊಸ ಬೋಧನೆಗಳಿಂದ ಭರ್ತಿಮಾಡಲಾಗಿದೆ ಎಂದು ಬಹುಶಃ ಯೇಸು ಈ ಆಲೋಚನೆ ಹೇಳಿರಬಹುದು. ಅವರ ಉಪವಾಸ ಪದ್ಧತಿಯು, ಅವರ

ಪಾರಂಪರ್ಯದ ಒಂದು ಭಾಗವಾಗಿತ್ತು. ಹಳೆ ವಸ್ತ್ರಕ್ಕೆ ಹೊಸ ತ್ಯಾಪೆ ಉಪಯೋಗವಿಲ್ಲದ್ದು ಮತ್ತು ಹಳೆ ಬುದ್ದಲಿಯಲ್ಲಿ ಹೊಸ ದ್ರಾಕ್ಷಾರಸ ಹಾಕಿದಾಗ ಅದು ಒಡೆದುಹೋಗುತ್ತದೆ. ಯೇಸು ಹಳೆ ಪದ್ಧತಿಯನ್ನು ಸರಿಪಡಿಸಲು ಬಂದಿಲ್ಲ, ಆದರೆ ಸಂಪೂರ್ಣವಾಗಿ ಹೊಸದನ್ನು ಮಾಡುವಾತ ನಾಗಿದ್ದಾನೆ. ಅವರ ಶಕ್ತಿಗುಂದಿದ ಸೂತ್ರಗಳಿಗೆ ಹೊಸ ಸತ್ಯವೆಂಬ ತ್ಯಾಪೆಯನ್ನು ಹಚ್ಚುವದಿಲ್ಲ ಅದನ್ನು ತೆಗೆದುಹಾಕಲು ಬಂದನು. ಆತನು ಯೆಹೂದ್ಯ ಮತದಲ್ಲಿರುವ ಭ್ರಷ್ಟಚಾರವನ್ನು ಪುರ್ನಸ್ಥಾಪಿಸಲು ಬರಲಿಲ್ಲ ಆದರೆ ಅದನ್ನು ಅಲ್ಲಿಂದ ತೆಗೆದುಹಾಕಲು ಬಂದನು ಎಂದು ಯೇಸು ಫರಿಸಾಯರಿಗೆ ಸ್ಪಷ್ಟಮಾಡಿದ್ದಾನೆ (ನೋಡಿರಿ 5:17). ಆತನು ನಂಬುವ, ಆಲೋ ಚಿಸುವ, ಜೀವಿಸುವ ಒಂದು ಹೊಸ ಮಾರ್ಗವನ್ನು ತೆಗೆದುಕೊಂಡು ಬಂದನು. ಇಲ್ಲಿರುವ ಮುಖ್ಯ ಪಾಠವೆನೆಂದರೆ ಆತನು ತೆಗೆದುಕೊಂಡು ಬಂದಿರುವ ಹೊಸ ಕ್ರಮವು ಮನುಷ್ಯರು ಮಾಡಿರುವ ಉಪವಾಸ ಕ್ರಮಕ್ಕೆ ಹೊಂದಿಕೆಯಾಗುವದಿಲ್ಲ.

ಉಪವಾಸವು ಹಳೆ ಪದ್ಧತಿಯಲ್ಲಿ ಮುಖ್ಯವಾದ ಭಾಗವಾಗಿದ್ದರೂ (6:16-18). ಮೇಲಿಂದ ಮೇಲೆ, ಅನೇಕ ಸಾರಿ ಉಪವಾಸವನ್ನು ಲಕ್ಷವಿಟ್ಟು ಗಮನಿಸಿದಾಗ ಇದು ಸಂಪೂರ್ಣವಾಗಿ ಮಾನವನ ಕಲ್ಪನೆಯೇ ಆಗಿದೆ. ಯೇಸು ಉಪವಾಸವನ್ನು ಖಂಡಿಸಲಿಲ್ಲ, ಆದರೆ ಹಳೆ ದ್ರಾಕ್ಷಾರಸ ಬುದ್ದಲಿಯ ಪದ್ಧತಿಗೆ - ಬಂದಿಯಾಗಿರುವದು ಉಪವಾಸದ ನಿಜವಾದ ಅರ್ಥ ಮತ್ತು ಉದ್ದೇಶ ಮರೆತು ಹೋಗಿದ್ದನ್ನು ಖಂಡಿಸಿದ್ದಾನೆ. ತನ್ನ ಶಿಷ್ಯರಿಗೆ ಉಪವಾಸದ ವಿಷಯದಲ್ಲಿ ಫರಿಸಾಯರ ಆಚರಣೆ ಹಿಂಬಾಲಿಸದಿರಲು ಆತನು ಎಚ್ಚರಿಕೆ ಕೊಡುತ್ತಿದ್ದಾನೆ, ಮತ್ತು ಸಂದರ್ಭ ಬಂದಾಗ ಉಪವಾಸದ ಮೌಲ್ಯವನ್ನು ಅವರಿಗೆ ಒತ್ತಿ ಹೇಳಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 13:2, 3; 14:23; 2 ಕೊರಿಂಥ 6:5; 11:27).

## ಪಾಠಗಳು

### ಯೇಸುವಿನ ಆಹ್ವಾನದ ಪಟ್ಟಿ (9:9-13)

ಸಮಯಕ್ಕನುಗುಣವಾಗಿ, ನಾವು ಆಹ್ವಾನದ ಪಟ್ಟಿಗಳನ್ನು ಮಾಡುತ್ತೇವೆ. ಇದು ಮಗುವಿನ ಹುಟ್ಟುಹಬ್ಬದ ಕೂಟಕ್ಕೆ ಸಂಬಂಧಪಟ್ಟಿರಬಹುದು, ಯೌವ್ವನಸ್ಥ ಜೋಡಿಯ ಮದುವೆಯಾಗಿರಬಹುದು, ಅಥವಾ ಹಿರಿಯ ದಂಪತಿಗಳ ಮದುವೆಯ ವಾರ್ಷಿಕೋತ್ಸವ ಇರಬಹುದು. ಅಂತಹಾ ರೀತಿಯಲ್ಲೇ, ಪರಲೋಕ ರಾಜ್ಯದ ಭೋಜನ ಕೂಟಕ್ಕಾಗಿ ಯೇಸು ಆಹ್ವಾನಪಟ್ಟಿಯನ್ನು ಮಾಡಿದನು, ಮತ್ತು ಅದು ಪಾಪಿಗಳಿಂದ ಒಳಗೊಂಡಿರುತ್ತದೆ (ನೋಡಿರಿ 22:1-10). "ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" ಎಂದು ಹೇಳಿದನು (9:13). ಯಾರು ತಮ್ಮನ್ನು ತಾವೇ "ನೀತಿವಂತರೆಂದು" ಅಭಿಪ್ರಾಯ ಹೊಂದಿದ್ದಾರೋ ಅವರು ತಮ್ಮ ಪಾಪದ ವಿಷಯಕ್ಕೆ ಕುರುಡರಾಗಿದ್ದಾರೆ. ಅದರ ನಿಮಿತ್ತವಾಗಿ ಅವರು ಯೇಸುವಿನ ಕರೆಯಿಂದ ದೂರವಿದ್ದರು. ಅದಕ್ಕೆ ಭಿನ್ನವಾಗಿ, ಯಾರು ಅವರ ಪಾಪದ ವಿಷಯವಾಗಿ ಎಚ್ಚರವಾಗಿರುತ್ತಾರೋ ಅವರು ಕೃಪೆಯ ಅಗತ್ಯತೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ. David Stewart

### ಇಂದಿನ ಉಪವಾಸ (9:14-17)

ಯೇಸುವಿನ ಶಿಷ್ಯರು ಉಪವಾಸ ಮಾಡುವದಿಲ್ಲ ಎನ್ನುವ ಅಂಶದಿಂದ ಯೋಹಾನನ ಶಿಷ್ಯರು ಆತಂಕವನ್ನುಂಟುಮಾಡಿದರು. ಆತನ ಹಿಂಬಾಲಕರು ಯೇಸು ಅವರ ಮಧ್ಯದಲ್ಲಿ ಇರುವ ತನಕ ಅವರು ಉಪವಾಸ ಮಾಡುವದು ಅಸಮಂಜಸವಾಗಿದೆ ಎಂದು ಯೇಸು ಗೋಳಾಟದೊಂದಿಗೆ ಇರುವ ಉಪವಾಸದ ಕುರಿತಾಗಿ ವಿವರಿಸಿದನು. ಯೇಸುವನ್ನು ಕ್ರೂಜೆಗೆ ಹಾಕಿದಾಗ ಅವರು ಉಪವಾಸ ಮಾಡುವ ಅಥವಾ ಗೋಳಾಡುವ ಸಮಯ ಬರುತ್ತದೆ.

ಹಾಗಿದ್ದರೂ, ಈ ದುಃಖವು ಕ್ರಿಸ್ತನು ಪುನರುತ್ಥಾನಗೊಂಡಾಗ ದುಃಖವು ಹೋಗಿ ಸಂತೋಷದೊಂದಿಗೆ ಇದ್ದರು. ಇಂದು, ನಾವು ಪುನರುತ್ಥಾನಗೊಂಡು ದೇವರ ಬಲಪಾರ್ಶ್ವದಲ್ಲಿ ಹಾಸಿನವಾಗಿರುವ ರಕ್ಷಕನನ್ನು ಸೇವಿಸುತ್ತಿದ್ದೇವೆ! ಅದು ಮಾತ್ರವಲ್ಲದೇ, ಆತನು ನಮ್ಮ ಹೃದಯದಲ್ಲಿ ವಾಸಮಾಡಲು ಪವಿತ್ರಾತ್ಮನನ್ನು ಕಳುಹಿಸಿದನು. ನಾವು ಕ್ರಿಸ್ತನು ಹಿಂತಿರುಗಿ ಬರುವದನ್ನು ಎದುರು ನೋಡುತ್ತಿದ್ದೇವೆ, ಆತನು ಬರುವಾಗ ನಮ್ಮ ಎಲ್ಲಾ ನಿರೀಕ್ಷೆಗಳು ಮತ್ತು ಕನಸುಗಳು ನೆರವೇರುತ್ತವೆ. ಹೊಸ ಒಡಂಬಡಿಕೆಯಲ್ಲಿ ನಿರಂತರವಾಗಿ ನಡೆಯುವ ಉಪವಾಸದ ಕುರಿತು ಸೂಚಿಸಿರುವದಿಲ್ಲವಾದರೂ, ಕೆಲವು ಸಾರಿ ಉಪವಾಸ ಯುಕ್ತವಾಗಿದೆ. ಆದಿಸಭೆಯಲ್ಲಿ ಮುಖ್ಯವಾದ ತೀರ್ಮಾನ ಮಾಡುವಾಗ ಮತ್ತು ಸೇವಕರನ್ನು ಕಳುಹಿಸುವಾಗ ಅಥವಾ ಹಿರಿಯರನ್ನು ನೇಮಿಸುವಾಗ ಉಪವಾಸ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 13:2, 3; 14:23). ಸಭೆ ಇಂದು ಮುಖ್ಯವಾದ ನಿರ್ಧಾರಗಳನ್ನು ಎದುರಿಸುವಾಗ ಅಥವಾ ಕಷ್ಟಗಳನ್ನು ಎದುರಿಸುವಾಗ, ಉಪವಾಸ ಮತ್ತು ಪ್ರಾರ್ಥನೆ ಮಾಡುವದರಿಂದ ಲಾಭವನ್ನು ಹೊಂದಬಹುದು.

David Stewart

## ಸಮಂಜಸವಾದ ಸುವಾರ್ತೆ (9:14-17)

ಹೊಸ ಮಾರ್ಗಗಳಿಂದ ಅಥವಾ ಹೊಸ ಭಾಷಾರ್ಥದಲ್ಲಿ ಜನರು ಅರ್ಥಮಾಡಿಕೊಳ್ಳುವಂತೆ ಸುವಾರ್ತೆ ಹೇಳುವದರಲ್ಲಿ ಯಾವುದೇ ತಪ್ಪು ಇಲ್ಲ. ಹೀಗಿದ್ದರೂ, ಸತ್ಯವೇದದ ಭಾಷೆ ಮತ್ತು ನಿರ್ಧಿಷ್ಟವಾದ ಸಂಸ್ಕೃತಿಗೆ ಸಂಬಂಧಿಸಿದ ದೃಷ್ಟಾಂತಗಳ ವಿವರಣೆ, ಸಂದೇಶವನ್ನು ಯಾವುದೇ ರೀತಿಯಾಗಿ ಬದಲಾಯಿಸಬಾರದು ಮತ್ತು ಅದನ್ನು ದುರುಪಯೋಗ ಪಡಿಸಿಕೊಳ್ಳಬಾರದು (ಯೋಹಾನ 12:48; 1 ಕೊರಿಂಥ 15:1-4; ಗಲಾತ್ಯ 1:6-9; ಯೂದ 3). ಮನುಷ್ಯರು ಮಾಡಿದ ಸಂಪ್ರದಾಯದಿಂದ ಸುವಾರ್ತೆಯ ಬಲವನ್ನು ಅದರ ಸಾರಂಶವನ್ನು ಕಡಿಮೆ ಮಾಡಬಾರದು (15:1-9; ಕೊಲಸ್ಸೆ 2:8) ಅಥವಾ ಇತರ ಮತ ಧರ್ಮದ ಪದ್ಧತಿ ಕ್ರಮಗಳೊಂದಿಗೆ ಒಗ್ಗೂಡಿಸುವಂಥದಕ್ಕಾಗಿಯೂ ಅಲ್ಲ (ಕೊಲಸ್ಸೆ 2:20-22; 2 ಯೋಹಾನ 9-11).

ಸಂಪ್ರದಾಯಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಉಪವಾಸದ ನಿಜವಾದ ಅರ್ಥ ಮತ್ತು ಉದ್ದೇಶವನ್ನು ಮರೆತುಬಿಟ್ಟದ್ದಕ್ಕಾಗಿ ಯೇಸು ಖಂಡಿಸಿದನು. ಫರಿಸಾಯರು ಮತ್ತು ಯೋಹಾನನ ಶಿಷ್ಯರಂತೆ ನಿರಂತರವಾದ ಉಪವಾಸ ಆಚರಣೆ ಮಾಡಿದಂತೆ ಯೇಸುವಿನ ಶಿಷ್ಯರು ಅದನ್ನು ಅನುಸರಿಸಬಾರದೆಂದು 9:15-17ರಲ್ಲಿ ಮೂರು ದೃಷ್ಟಾಂತಗಳನ್ನು ಪ್ರಸ್ತಾಪಿಸಿದ್ದಾನೆ. "ಈ ಪಾಠವನ್ನು ಪರಿಣಾಮಕಾರಿಯಾಗಿ ಮಾಡಲು ಉಪವಾಸದ ಮೌಲ್ಯವನ್ನು ಸಂದರ್ಭಕ್ಕನುಸಾರವಾಗಿ ಅವಶ್ಯಕತೆ ಇದ್ದಾಗ ಇದನ್ನು ಮಾಡಬಹುದು"[28] ಎಂದು Boles ರವರು ಬರೆದಿದ್ದಾರೆ.

ಈ ದೃಷ್ಟಾಂತಗಳು ಸುವಾರ್ತೆಯನ್ನು ಬದಲಾಯಿಸಲು ಸೂಚಿಸುತ್ತವೆ ಎಂದು ಕೆಲವರು ಈ ವಾಕ್ಯಭಾಗವನ್ನು ತಪ್ಪಾದ ರೀತಿಯಲ್ಲಿ ವಿವರಿಸುತ್ತಾರೆ. ವಾಸ್ತವಿಕವಾಗಿ, ಫರಿಸಾಯರು ಮಾಡುವ ಉಪವಾಸವನ್ನು ಒಂದು ಉದಾಹರಣೆಯಾಗಿ ಉಪಯೋಗಿಸಿ ಈ ವಾಕ್ಯಭಾಗವು ವಿರುದ್ಧಾತ್ಮಕವಾಗಿ ಬೋಧಿಸುತ್ತದೆ. ದೇವರ ವಾಕ್ಯವು ಹೇಗೆ ವಿವರಿಸುತ್ತದೆ ಎಂಬುದರ ಬಗ್ಗೆ ಬದಲಾವಣೆಯನ್ನು ಕೇಳುವವರು, ಈ ವಿಷಯವನ್ನು ಅಂಗೀಕರಿಸದಿದ್ದರೂ ಸಹ ಅದನ್ನೆ ಮಾಡುತ್ತಿರುವವರಾಗಿದ್ದಾರೆ.

ಟಿಪ್ಪಣಿಗಳು

[1]William Barclay, *The Master's Men* (Nashville: Abingdon Press, 1959), 58. [2]Thomas E. Schmidt, "Taxes," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 806. [3]Mishnah *Tohoroth 7.6*; *Hagigah* 3.6. [4]Mishnah *Baba Kamma* 10.1. [5]Talmud *Sanhedrin* 25b. [6]R. T. France, *The Gospel According to Matthew*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 166–67. [7]ನೋಡಿರಿ Leon Morris, *The Gospel According to Matthew*, Pillar Commentary (Grand Rapids, Mich.: Wm. B. Eerdmans Publishing Co., 1992), 219. ನೋಡಿರಿ ರೋಮ ಸರ್ಕಾರವು ಅಂತಿಪಸ್ ಹೆರೋದನಿಗೆ ಗಲಿಲಾಯ ಮತ್ತು ಪೆರಯಾದಿಂದ ಸುಂಕವಸೂಲಿ ಮಾಡುದಕ್ಕೂ ಅದನ್ನು ಉಪಯೋಗಿಸುವದಕ್ಕೂ ಅವಕಾಶ ಮಾಡಿಕೊಡಲಾಯಿತು. (Josephus Antiquities 17.11.4.) [8]Ibid., 220. [9]ನೋಡಿರಿ Michael J. Wilkins, "Sinner," in *Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 757–60. [10]ಉದಾಹರಣೆಗಾಗಿ ನೋಡಿರಿ Mishnah *Demai* 2.2, 3 ರಲ್ಲಿ "ಆ ದೇಶ ಜನರ ಮತ್ತು ನಿಷ್ಠೆಯುಳ್ಳವರ ಮಧ್ಯೆಯಿರುವ ಸೌಹಾರ್ದದ ಬಗ್ಗೆ ಚರ್ಚಿಸಲಾಗಿದೆ.

[11]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 295. ನೋಡಿರಿ ಮತ್ತಾಯ 9:13; 21:32; 26:45; ಲೂಕ 5:8; 7:37; 13:1, 2; 24:7; ಯೋಹಾನ 9:31. [12]ಮೇಜಿನ ಊಟದ ಅನ್ಯೋನ್ಯತೆಯು ಆದಿ ಸಭೆಯಲ್ಲಿ ಮುಖ್ಯವಾದ ಸಂಗತಿಯಾಗಿತ್ತು ಯಾಕೆಂದರೆ ಯೆಹೂದ್ಯರು ಸಂಪ್ರದಾಯಿಕವಾಗಿ ಅನ್ಯರೊಂದಿಗೆ ಅವರು ಊಟಮಾಡುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 10:28; 11:2, 3; ಗಲಾತ್ಯ 2:12, 13). ಅವರು ಕ್ರಿಸ್ತನಲ್ಲಿ ಐಕ್ಯತೆ ಕಂಡುಕೊಳ್ಳುತ್ತಿದ್ದರು, ಅವರಲ್ಲಿ ಜನಾಂಗಿಯ ಮೇಲೆ ವ್ಯತಾಸವಿದ್ದರೂ, ಜೊತೆ ವಿಶ್ವಾಸಿ ತನ್ನ ಊಟವನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬೇಕಿತ್ತು. ಹೀಗಿದ್ದರೂ, ಅವರಿಗೆ ಒಂದು ಆಜ್ಞೆ ಇತ್ತು, ಒಬ್ಬರು ಅನೀತಿವಂತರಾಗಿ ಜೀವಿಸುವವರೊಂದಿಗೆ "ಊಟ ಸಹ ಮಾಡಬಾರದು" (1 ಕೊರಿಂಥ 5:11). [13]Diogenes Laertius *Lives of Eminent Philosophers* 2.70; 6.1.6. [14]Dio Chrysostom *Eighth Discourse: On Virtue* 5. [15]Cicero *Tusculan Disputations* 3.3.5; Diodorus Siculus 12.13.4. [16]Epictetus *Discourses* 2.14.21, 22; Livy 42.40.3. [17]Lucian *Demonax* 7. [18]John Phillips, *Exploring the Gospel of Matthew: An Expository Commentary*, The John Phillips Commentary Series (Grand Rapids, Mich.: Kregel Publications, 1999), 163. [19]Jack P. Lewis, *The Gospel According to Matthew*, Part 1, The Living Word Commentary (Austin, Tex.: Sweet Publishing Co., 1976), 135. [20]Ibid.

[21]J. W. McGarvey, *The New Testament Commentary*, vol. 1, *Matthew and Mark* (N.p., 1875; reprint, Delight, Ark.: Gospel Light Publishing Co., n.d.), 83. [22]Douglas R. A. Hare, *Matthew*, Interpretation (Louisville: John Knox Press, 1993), 101. [23]Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 85. [24]ಅಪ್ರಮಾಣಿಕ ಗ್ರಂಥಗಳಲ್ಲಿ, ವಿಪತ್ತುಗಳು ಮದುವೆಯ ಸಾಮಾನ್ಯ ಸಂತೋಷ ದೊಡ್ಡ ದುಃಖ ಮತ್ತು ಗೋಳಾಟವಾಗಿ ಮಾರ್ಪಡಿಸುತ್ತವೆ (1 Maccabees 1:27, 39; 9:39–41). [25]Lewis, 137. [26]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 169. [27]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 428–29. [28]Boles, 210.